International Journal of Kannada Research
www.kannadajournal.com

**ISSN: 2454–5813**
IJKR 2021; 7(4): 199-202
© 2021 IJKR
www.kannadajournal.com
Received: 10-06-2021
Accepted: 18-08-2021

**Dr. Udayakumar Shetty**
Principals, Department of Kannada, Government First Class College and Postgraduate Studies Center Sankaranarayana, Kundapur, Taluk, Udupi, Karnataka, India

**Corresponding Author:**
**Dr. Udayakumar Shetty**
Principals, Department of Kannada, Government First Class College and Postgraduate Studies Center Sankaranarayana, Kundapur, Taluk, Udupi, Karnataka, India

# ಬಡಗು ತಿಟ್ಟಿನ ಯಕ್ಷಗಾನ ಕಲೆ

**Dr. Udayakumar Shetty**

ಕರ್ನಾಟಕದ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ದಶಾವತಾರದ ಆಟಗಳನ್ನು ಆಡುವ ಮೇಳಗಳಿವೆ. ಇವುಗಳು ತಮ್ಮ ಮೇಳಗಳ ಜೊತೆ ಊರಿಂದ ಊರಿಗೆ ಸಂಚರಿಸುವುದು ಪದ್ಧತಿ ಇವರು ಆಡುವ ಆಟಗಳು ಬಯಲು ಪ್ರದೇಶಗಳಲ್ಲಿದ್ದು, ಬಯಲಾಟವೆಂದು ಕರೆದು ಜನಪ್ರಿಯತೆ ಬಂದೊದಗಿದಾಗ ಅದು ಟೆಂಟ್ ಆಟಗಳಾಗಿ ವಾಣಿಜ್ಯ ವ್ಯವಹಾರದ ಕಡೆಗೆ ತಿರುಗಿದೆ. ಬಯಲಾಟದಲ್ಲಿ ಭಗವಂತ ಅದರಲ್ಲೂ ವಿಷ್ಣುವಿನ ದಶಾವತಾರದ ಕತೆ ಇರುವುದರಿಂದ ದಶಾವತಾರಮೇಳ ಎಂದೂ ಕರೆದಿರುತ್ತಾರೆ. ಇದರಲ್ಲಿ ಭಾಗವತರ ಗೀತಕ್ಕೆ ಗಾನವೆಂದು ಕರೆಯಲಾಗುವುದರಿಂದ ಯಕ್ಷಗಾನ ಎಂಬ ಹೆಸರು ಬಂದಿರಬೇಕು. ವೇಷಗಾರಿಕೆ, ಮಾತುಗಾರಿಕೆ, ನರ್ತನ, ಆಭಿನಯದಿಂದಾಗಿ ಆಟವೆಂದೂ ಇದಕ್ಕೆ ಚಂಡೆ, ಮದ್ದಳೆ, ಶ್ರುತಿ, ತಾಳ ಸೇರಿ ಪೂರ್ಣ ಪ್ರಮಾಣದ ಯಕ್ಷಗಾನ ಮೇಳವೆಂದು ಕರೆದಿರಬೇಕು.

ಇಲ್ಲಿ ಹಾಡು ಗಾಯನಕಲೆಗೂ, ಇಲ್ಲಿ ಸಂಗೀತ ಶಾಸ್ತ್ರೀಯವಾಗಿ ತಾಳಬದ್ಧವಾಗಿದ್ದು, ಭಾವಪ್ರಧಾನವಾದ ಹಾಡುಗಾರಿಕೆ ಹೀಗೆ ಸಂಗೀತದಿಂದ ಪ್ರೇಕ್ಷಕನ ಮನಸ್ಸನ್ನು ಸೆಳೆಯುವ ಮೋಡಿ ಈ ಯಕ್ಷಗಾನಕ್ಕಿದೆ. ಮಧ್ಯಕಾಲೀನ ಅವಧಿಯಲ್ಲಿ ಹುಟ್ಟಿದ ಈ ಯಕ್ಷಗಾನಕ್ಕೆ, ಕನ್ನಡದ ಕವಿಗಳಾದ ಲಕ್ಷ್ಮೀಶ ರಾಘವಾಂಕರು ಹಾಗೂ ಕೀರ್ತನಕಾರರು ಪ್ರೇರಕರಾಗಿದ್ದಾರೆ. ಅವರ ಪಟ್ಟದಿಗಳು ಸಂಗೀತ ತಾಳಕ್ಕೆ ಅನುಕೂಲಕರವಾಗಿ ಮೇಳೈಸಿದೆ. ಇಷ್ಟಲ್ಲದೆ ಇಲ್ಲಿ ಬರುವ ವೇಷಭೂಷಣಗಳು ಯಕ್ಷಲೋಕಕ್ಕೆ ಸಂಬಂಧಿಸಿದ್ದಾಗಿದ್ದೂ ಇದನ್ನು ಕಟ್ಟುವ ಕಲೆಗಾರಿಕೆಯೂ ಪ್ರತಿಭೆಯಿಂದ ಮಾತ್ರ ಸಾಧ್ಯ. ಪ್ರೇಕ್ಷಕನ ಭಾವ ಮನಸ್ಸನ್ನು ಸೂರೆಗೊಳ್ಳುವಂತೆ ಕಿರೀಟ, ಮುಂಡಾಸು, ಬಣ್ಣಬಣ್ಣದ ರಂಗು ರಂಗಿನ ರಂಗಸ್ಥಳದಲ್ಲಿ ರಾತ್ರಿ ಹೊತ್ತು ದೀವಟಿಕೆಯ ಬೆಳಕಿನಲ್ಲಿ ವಿಶಿಷ್ಟ ಮನೋರೂಪಗಳನ್ನು ಕೊಡುವಂತಿರುತ್ತದೆ. ಹಾಗಾಗಿ ಕೇದಗೆ ಮುಂಡಾಸು, ದೊಡ್ಡ ಮುಂಡಾಸು, ಕಿರಾತನ ವೇಷ, ಹನುಮಂತ, ಹಾಸ್ಯಗಾರ, ರಕ್ಕಸ, ಹೀಗೆ ನಾನಾ ನಮೂನೆಗಳ ಪಾತ್ರಗಳು ರಸಿಕರ ಮನಸ್ಸನ್ನು ಸೆಳೆದವು. ಗಂಡಾಗಿ ಹೆಣ್ಣಾಗಿ ಕೆರಳಿಸುವ ಹೆಣ್ಣುಪಾತ್ರಗಳು ಸ್ಪರ್ಧೆಯೊ ಎಂಬಂತೆ ಅನೇಕ ನಾಯಕಿ ಪಾತ್ರಗಳು ಚಿರಸ್ಮರಣೀಯವಾದುವು. ಸಿರಿಯಾಸ, ಇಲ್ಲದಿದ್ದರೆ, ಯಕ್ಷಗಾನವೇ ಅಲ್ಲ ಎಂಬ ನಂಬಿಕೆ ಬಂತು.

ಈ ಯಕ್ಷಗಾನಕ್ಕೆ ಹಿಂದೆ ಶಿಕ್ಷಣ ಒದಗುತ್ತಿದ್ದು ಅದರ ಹುಟ್ಟಿನ ಕುರಿತು ಅನೇಕ ಕುತೂಹಲಗಳಿವೆ. ಯಕ್ಷಗಾನದ ಹುಟ್ಟಿನ ಕುರಿತು ಖಚಿತ ನಿರ್ಣಯಕ್ಕೆ ಇನ್ನೂ ಬಂದಿಲ್ಲ. ಮೆಕ್ಕೆಕಟ್ಟುವಿನ ಉರುಗಳ ಅಭ್ಯಾಸದಿಂದ ಅಲ್ಲಿನ ಉರುಗಳ ವೇಷಭೂಷಣಗಳು ಯಕ್ಷಗಾನದಿಂದ ಬಂದ ರೀತಿ ಎನ್ನುವವರಿದ್ದಾರೆ. ಮೆಕ್ಕೆಕಟ್ಟುವಿನ ಉರುಗಳ ಯಕ್ಷಗಾನದ ಪ್ರಾಚೀನತೆಯನ್ನು ಹೇಳುವಂತಿದೆ. ಸುಮೇರಿಯನ್ ನಾಗರೀಕತೆಯತ್ತ ಕೊಂಡೊಯ್ದು ಕ್ರಿ.ಪೂರ್ವಕ್ಕೂ ಹಿಂದಕ್ಕೆ ಯಕ್ಷಗಾನ ಹುಟ್ಟಿದೆ ಎನ್ನುವ ಊಹೆಯನ್ನು ಮಾಡಲಾಗಿದೆ. ಯಕ್ಷಗಾನದ ಹುಟ್ಟಿಗೆ ಸಂಬಂಧಿಸಿದ ಕೆಲವು ಐತಿಹ್ಯಗಳ ಪ್ರಕಾರ ಯಕ್ಷಗಾನದ ಪರಿಕರಗಳು ಕೆಲವು ಆನೆಗುಡ್ಡೆ, ಉಡುಪಿ ಕೃಷ್ಣಮಠ, ಹಾಲಾಡಿಯಿಂದ ಸಿದ್ಧವಾಯಿತೆಂದೂ ಬಯಲಾಟದ ಸಿದ್ಧತೆಗೆ ಸುರ್ಗೋಳಿ ಅಂತು ನೇತೃತ್ವವಹಿಸಿದನೆಂದೂ ಮಂದರ್ತಿ ಮೇಳವೇ ಪ್ರಾಚೀನವಾದುದು ಎಂಬ ಊಹೆಗಳು ಇವೆ. ಉಡುಪಿ ಕೃಷ್ಣ ಮಠದವರು ಯಕ್ಷಗಾನದ ಪೋಷಕರೆಂದು ತಿಳಿದುಬರುತ್ತದೆ. ದಶಾವತಾರ ಹಾಗೂ ಕೀರ್ತನ ಸಾಹಿತ್ಯ ಮತ್ತು ವೈಷ್ಣವಪಂಥದ ಧರ್ಮದ ಪ್ರಸಾರಕ್ಕೆ ಕೃಷ್ಣಮಠದವರು ಯಕ್ಷಗಾನ ಬಯಲಾಟದ ಪೋಷಕರಾಗಿ ಧರ್ಮ ಹಾಗೂ ಶಿಕ್ಷಣವನ್ನು ಸಮಾಜಕ್ಕೆ ನೀಡಿದರೆಂದು ತಿಳಿಯಬಹುದಾಗಿದೆ. ಒಟ್ಟಿನಲ್ಲಿ ಬಡಗುತಿಟ್ಟಿನ ಮೇಳಗಳೆಲ್ಲವೂ ಉಡುಪಿ ಜಿಲ್ಲೆಯಲ್ಲಿದ್ದು ಇಲ್ಲಿಯ ಮೇಳಗಳಿಗೆ ಇತಿಹಾಸವಿದೆ. ಇಲ್ಲಿ ಟೆಂಟ್ ಮೇಳವನ್ನು ಕಟ್ಟಿಕೊಳ್ಳದೆ, ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸುತ್ತಾ ಬಯಲಾಟಗಳಾಗಿ ತಮ್ಮ ಹರಕೆ ಸೇವೆಯಲ್ಲಿ ತಿರುಗಾಟದಲ್ಲಿ ಅವುಗಳು ತಮ್ಮ ಕಾಯಕವನ್ನು ಮುಂದುವರಿಸುತ್ತಿವೆ.

ಪ್ರಾಚೀನ ಬಡಗುತಿಟ್ಟಿನ ಯಕ್ಷಗಾನ ಮೇಳಗಳೆಂದರೆ, ಮಂದರ್ತಿ ಮೇಳ ಮೊತ್ತಮೊದಲಿಗೆ ಒಂದು ಮೇಳವಾಗಿದ್ದ ಮಂದರ್ತಿ ಇಂದು ಆರು ಮೇಳಗಳಾಗಿ ಮೂವತ್ತು ವರ್ಷದ ಹರಕೆಯ ಬುಕಿಂಗ್ ಈವಾಗಲೇ ತುಂಬಿಸಿಕೊಂಡಿದೆ, ಕೆಲವೊಮ್ಮೆ ಹಣವನ್ನೆ ಹರಕೆಯ ಬದಲಿಗೆ ಕಟ್ಟುವ ವರಿದ್ದಾರೆ. ಮಂದರ್ತಿಯ, ಆಟ ಅತೀ ವೆಚ್ಚದ ಹರಕೆಯಾಗಿದ್ದು, ಇದರಿಂದ ದೇವಾಲಯಕ್ಕೆ ಅಪರಿಮಿತ ಉತ್ಪತ್ತಿ ಇದೆ.

ಮಾರಣಕಟ್ಟೆ ಮೇಳವೂ ಬಡಗಿನಲ್ಲಿದ್ದು ಈಗ ಎರಡು ಮೇಳಗಳಾಗಿವೆ. ಹೀಗೆಯೇ ಸೌಕೂರು ಮೇಳ, ಪೆರ್ಡೂರು ಮೇಳ, ಕಮಲಶಿಲೆ ಮೇಳ, ಅಮೃತೇಶ್ವರಿ ಮೇಳ, ಸಾಲಿಗ್ರಾಮ ಮೇಳ, ಹಾಲಾಡಿ ಮೇಳಗಳು ಆಯಾ ಪ್ರದೇಶದ ದೇವಾಲಯಕ್ಕೆ ಸಂಬಂಧಿಸಿದ ಮೇಳಗಳಾಗಿವೆ. ಇವೆಲ್ಲವೂ ಬಯಲಾಟದ ಬಡಗು ತಿಟ್ಟಿನ ಮೇಳಗಳಾಗಿ ಮೆರೆದು ಬಂದಿದೆ. ಯಕ್ಷಗಾನದ ಮೂಲಕ ದೃಶ್ಯ ಶ್ರವ್ಯ ಮಾಧ್ಯಮದಲ್ಲಿ ಶಿಕ್ಷಣವನ್ನು ಕೂಡಾ ದಾರೆಯೆರೆಯುವ ಪ್ರದರ್ಶನ ಕಲೆಯಾಗಿ ಇವುಗಳು ಮರೆದಿದೆ. ಇದಕ್ಕಿಂತಲೂ ಮುಖ್ಯವೆಂದರೆ ಓದು ಬರಹ ಬಾರದ ಜಿಲ್ಲೆಯ ಅಂದಿನ ಅವಿದ್ಯಾವಂತರನ್ನೂ ವಿದ್ಯಾವಂತರನ್ನಾಗಿಸಿ ಬುದ್ಧಿವಂತರಾಗುವಂತೆ ಅನೌಪಚಾರಿಕ ಶಿಕ್ಷಣವನ್ನು ಈ ಯಕ್ಷಗಾನ ಕಲೆ ನೀಡಿದೆ ಎನ್ನಬಹುದಾಗಿದೆ.

ಬಡಗು, ತೆಂಕಿನ ಮೇಳಗಳ ಯಕ್ಷಗಾನದಲ್ಲಿ ವ್ಯತ್ಯಾಸವಿದ್ದು, ಬಡಗುತಿಟ್ಟು ತನ್ನದೇ ಆದ ಸಂಪ್ರದಾಯ ಹಾಗೂ ವೈಶಿಷ್ಟಗಳನ್ನು ಉಳಿಸಿಕೊಂಡಿದೆ. ಪ್ರದರ್ಶನ ಕಲೆಗಳಲ್ಲಿ ಮೊತ್ತಮೊದಲಾಗಿ ಬರುವ ಈ ಮೇಳದ ಕಲೆಯಿಂದಾಗಿ ದೈವಸ್ಥಾನಗಳು ಜನಪ್ರಿಯಗೊಂಡಿವೆ. ಆಗಮ ಪದ್ಧತಿಯ ದೇವಾಲಯಗಳಲ್ಲಿ ಈ ಯಕ್ಷಗಾನ ಕಲೆ ಕಂಡುಬಾರದೆ ದೈವಸ್ಥಾನದಲ್ಲಷ್ಟೇ ಕಂಡುಬರುವುದರಿಂದ, ಗ್ರಾಮದೈವಗಳ ಅಧ್ಯಯನದ ಹಿನ್ನೆಲೆಯಲ್ಲಿ ಇದರ ಕುರಿತಾಗಿ ಅಭ್ಯಸಿಸಬಹುದು. ಉಡುಪಿಯ ಕೃಷ್ಣಮಠದವರು ಯಕ್ಷಗಾನ ಪೋಷಕರಾಗಿದ್ದರೇ ಹೊರತು, ಯಕ್ಷಗಾನದ ಮೇಳ ಮಠದಲ್ಲಿಲ್ಲ. ಮಠದ ಮೂಲಕ ದೈವಸ್ಥಾನಗಳಿಗೆ ನೆರವು ಲಭಿಸಿದ ವಿವರಗಳಿವೆ. ಮಠದಲ್ಲೂ ಯಕ್ಷಗಾನ ಬಯಲಾಟದ ಮೇಳವಿದ್ದು ಅದೇ ಮೇಳದ ಶಾಖೆಗಳಾಗಿ ಇದನ್ನು ದೈವಸ್ಥಾನಗಳಲ್ಲಿ ನಡೆಸುತ್ತಿದ್ದಿರಬೇಕೆಂಬ ಅಭಿಪ್ರಾಯವೂ ಇದೆ. ಇದಕ್ಕೆ ತಕ್ಕ ಶಿಕ್ಷಣ ಇಂದಿಗಿಂತಲೂ ಹಿಂದೆ ಶಾಸ್ತ್ರೀಯ ಬದ್ಧವಾಗಿತ್ತು. ಅದಕ್ಕೆ ತಕ್ಕ ಸಂಸ್ಥೆಗಳು ದೈವಸ್ಥಾನದಲ್ಲಿದ್ದು ತಕ್ಕ ಶಿಕ್ಷಕರಿದ್ದರೆಂಬುದನ್ನು ಊಹಿಸಲು ಸಾಧ್ಯವಿದೆ.

ಶಿವರಾಮ ಕಾರಂತರು ಯಕ್ಷಗಾನದ ಅಳಿವು ಉಳಿವಿನ ಕುರಿತು ಚಿಂತಿಸಿ ಬಡಗುತಿಟ್ಟಿನ ಯಕ್ಷಗಾನದ ಪರಂಪರೆಯನ್ನು ಎತ್ತಿ ಹಿಡಿದವರು, ಇಲ್ಲಿಯ ಜನಪದ ಪ್ರೇಕ್ಷಕರ ಕಳಕಳಿಯನ್ನು ಕಂಡವರು. ಈ ಪ್ರದರ್ಶನಕಲೆಯನ್ನು ಅಂತಾರಾಷ್ಟ್ರೀಯ ಮಟ್ಟದ ತನಕ ಎತ್ತರಕ್ಕೇರಿಸಿ ವಿದೇಶಿ ಸಂಶೋಧಕರನ್ನು ಎಳೆತಂದು ಕುಣಿಸಿ ಮಣಿಸಿದವರು, ಪ್ರದರ್ಶನ ಕಲೆಯ ಬೆಲೆಯನ್ನು ಕಾರಂತರು ಬೆಳಗಿಸಿದವರು. ಇದರಿಂದಾಗಿ ದೈವಸ್ಥಾನಗಳಿಗೆ ಅನುಕೂಲಕರವಾಗಿ ಅದರ ಉತ್ಪತ್ತಿ ಹೆಚ್ಚಿತು. ಶಿವರಾಮ ಕಾರಂತರಿಂದಾಗಿ ಇಂದು ಅನೇಕ ಯಕ್ಷಗಾನ ಕೇಂದ್ರಗಳು, ಯಕ್ಷಗಾನ ಪೀಠಗಳು ಹುಟ್ಟಿಕೊಂಡು ವಿಶ್ವವಿದ್ಯಾನಿಲಯ ಮಟ್ಟದ ತನಕ ಪಠ್ಯಕ್ರಮ ಯಕ್ಷಗಾನ ಅಧ್ಯಯನ ಮತ್ತು ಸಂಶೋಧನೆಗಳು ನಿರಂತರವಾಗಿ ನಡೆಯುತ್ತಲಿದೆ. ಪದವಿ ಹಾಗು ಸ್ನಾತಕೋತ್ತರ ಕನ್ನಡ ಪಠ್ಯಕ್ರಮದಲ್ಲಿ ಯಕ್ಷಗಾನ ವಿಷಯವು ಅಡಕಗೊಂಡಿದೆ.

ಯಕ್ಷಗಾನ ಕಲಾವಿದರಲ್ಲಿ ಜಿಲ್ಲೆಯ ಕೆಲವು ಕಲಾವಿದರನ್ನು ಇಲ್ಲಿ ಉಲ್ಲೇಖಿಸಬೇಕಾಗಿದ್ದು ಇವರೆಲ್ಲರೂ ಬಡಗುತಿಟ್ಟಿನ ಮೇಳದಿಂದಲೇ ಬಂದವರು, ಗೆಜ್ಜೆ ಕಟ್ಟುವಾಗ ಮಂದರ್ತಿ ಮೇಳದಿಂದಲೇ ಆರಂಭಿಸಬೇಕೆಂಬ ಪದ್ಧತಿ ಇದ್ದು ಇಲ್ಲಿರುವವರೆಲ್ಲರೂ ಮಂದರ್ತಿ ಮೇಳದಿಂದಲೇ ನಾಂದಿ ಹಾಡಿದವರು. ಅಂತ್ಯದಲ್ಲಿ ಅವರ ಸೇವೆ ಮಂದರ್ತಿಗೆ ಮುಡಿಪಾಗಿದೆ. ಅಂತಹ ಕಲಾವಿದರಲ್ಲಿ ಕೆಲವರು– ಉಪ್ಪಳ್ಳಿ ಶೇಷ (ದಶಾವತಾರಿ ಶೇಷಯ್ಯ), ಮಾರ್ವಿ ರಾಮಕೃಷ್ಣ ಹೆಬ್ಬಾರರು (ಸೌಕೂರು, ಮಾರಣಕಟ್ಟೆ), ಬಡಾಕೆರೆ ರಾಮಪ್ಪ ಅಡಿಗರು (ಮಾರಣಕಟ್ಟೆ), ಪಾಂಡೇಶ್ವರ ಪುಟ್ಟಯ್ಯ (ಮಾರಣಕಟ್ಟೆ), ಸಕ್ಕಟ್ಟು ಸುಬ್ಬಣ್ಣ (ಮಂದರ್ತಿ), ಕೊರ್ಕ್ಕರ್ಣೆ ನರಸಿಂಹ (ಪೆರ್ಡೂರು, ಮಂದರ್ತಿ ಹಿರಿಯಡ್ಕ), ನೀಲಾವರದ ಸುಬ್ಬಣ್ಣ ಶೆಟ್ಟಿ (ಸ್ತ್ರೀವೇಷ – ಮಂದರ್ತಿ), ಕೊಳ್ಳೆಬೈಲು ಶೀನನಾಯಕ (ಮಂದರ್ತಿ –ಸ್ತ್ರೀವೇಷ), ಬಣ್ಣದ ಕುಷ್ಟ (ಮಂದರ್ತಿ, ಧರ್ಮಸ್ಥಳ) ಭಾಗವತರಲ್ಲಿ ಪೆರ್ಡೂರು ರಾಮಣ್ಣಯ್ಯ, ಹಾಸ್ಯಗಾರರಾಗಿ– ಪೆರ್ಡೂರು ವೆಂಕಟೇಶ ಕಮ್ತಿ (ಮಂದರ್ತಿ), ಹಾಸ್ಯಗಾರ– ಸಾಲಿಗ್ರಾಮದ ಮಂಜುನಾಥಯ್ಯ (ಚೆಂಡೆಯಲ್ಲಿಯೂ ಪಳಗಿದವರು, ಮದ್ದಳೆಯಲ್ಲೂ ಅನುಭವಿ ಸಾಲಿಗ್ರಾಮ ಮೇಳ), ಪಾಂಡೇಶ್ವರ ವೆಂಕಟರಾಯರು, ಗಣಪತಿ, ಪಾಂಡೇಶ್ವರ ಪುಟ್ಟಯ್ಯ, ಸಕ್ಕಟ್ಟು ಸುಬ್ಬಣ್ಣಯ್ಯ, ಸಾಂತಾವರ ನಾಗಪ್ಪ, ಮಟಪಾಡಿ ಮುಕುಂದ ಕೊಳ್ಳೆಬೈಲು ಹೆರಿಯ, ಹಾರಾಡಿ ಕುಷ್ಟ ಮುಂತಾದವರು; ಪುರುಷವೇಷದಲ್ಲಿ ಗಣಪತಿ, ಪ್ರಭುಗಳು ಮಂದರ್ತಿ, ಸೌಕೂರು, ಪೆರ್ಡೂರು, ಸೂರಾಲು, ಹಾಲಾಡಿ, ಅಮೃತೇಶ್ವರಿ, ಮಾರಣಕಟ್ಟೆ ಮೇಳದಲ್ಲಿ ತಿರುಗಿ ಜನಪ್ರಿಯರಾದವರು, ಪ್ರಭುಗಳು ಮೈಸೂರು, ಮದ್ರಾಸು ನಗರಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಿ ಹಲವಾರು ಬಹುಮಾನ ಪ್ರಶಸ್ತಿ ಪಡೆದವರು, ಉಡುಪಿ ಬಸವ ಇವರ(ಪ್ರಭುಗಳ) ಪ್ರೇರಣೆಯಿಂದ ಬೆಳೆದವರು. ತೆಕ್ಕಟ್ಟೆ ಬಾಬಣ್ಣ ಶಾನುಭೋಗರು ತಾಳಮದ್ದಲೆಯಲ್ಲಿ ಪ್ರಸಿದ್ಧ ಅರ್ಥದಾರಿಯಾಗಿ ಪ್ರಸಿದ್ಧರಾದವರು, ಪೆರ್ಡೂರು ಹಾಗೂ ಮಂದರ್ತಿ ಮೇಳಗಳಲ್ಲಿ ಇವರ ಜನಪ್ರಿಯತೆ ಏರಿ ಪ್ರೇಕ್ಷಕರ ನೆನಪಿನಲ್ಲಿ ಉಳಿದರು. ಇವರಿಗೆ ಜೋಡಿಯಾಗಿ ಬಂದ ಕೊರ್ಕ್ಕರ್ಣೆ ನರಸಿಂಹ ಅವರ ಜೊತೆ ಮೈಸೂರಿನ ಅರಮನೆಯತನಕ ಇವರ ಕೀರ್ತಿ ಹಬ್ಬಿತು. ಮೈಸೂರಿನ ಮಹಾರಾಜರ ಎದುರು ಸಂಪೂರ್ಣ ರಾಮಾಯಣ ಪ್ರಸಂಗದಲ್ಲಿ ಇವರಿಬ್ಬರೂ ರಾಮ, ರಾವಣರಾಗಿ ಮೆರೆದರು, ಕುಂಜಾಲು ಶೇಷಗಿರಿ ಕಿಣಿಯವರು ಉಡುಪಿ ಹತ್ತಿರದ ಮೇಳವೊಂದರಿಂದ ಬಂದು ಉಡುಪಿಯ ರಥೋತ್ಸವ ದೀಪೋತ್ಸವದ ಸಂರ್ದದಲ್ಲಿ ಯಕ್ಷಗಾನ ಮೇಳ ಮೆರವಣಿಗೆ ಹೋಗುವ ಸಂದರ್ಭದಲ್ಲಿ ವೇಷಹಾಕಿಕೊಂಡು ತಿರುಗಿ ಮುಂದೆ ಮೇಳದಲ್ಲಿ ಜನಪ್ರಿಯ ಭಾಗವತರಾಗಿ ಮೂಡಿಬಂದರು. ಮಂಜಪ್ಪ ಭಾಗವತರ ಶಿಷ್ಯರಾಗಿ ಮಂದರ್ತಿ ಮೇಳದ ಮದ್ದಳೆಗಾರರಾದ ಗುಂಡ್ಮಿ ಉಡುಪರಿಂದ ಮಂದರ್ತಿ ಮೇಳಕ್ಕೆ ಆಯ್ಕೆಯಾದರು. ದೈವದತ್ತವಾದ ಕಂಠ, ಪ್ರತಿಭೆ ಹಾಗೂ ಗುರುಗಳ ಸಹಕಾರದಿಂದ ಅಪೂರ್ವ ಭಾಗವತರಾಗಿ –ಪ್ರಸ್ತಕದ ಭಾಗವತರಲ್ಲ, ಮಸ್ತಕದ ಭಾಗವತರೆಂಬ ಖ್ಯಾತಿಗೆ ಭಾಜನರಾದರು.

ಹಾರಾಡಿ ರಾಮ ಬಡಗುತಿಟ್ಟಿನ ಯಕ್ಷಗಾನ ಕಲೆಗೆ ಅಪರೂಪದ ಕೊಡುಗೆ, ಮಂದರ್ತಿ, ಮಾರಣ ಕಟ್ಟೆ ಮೇಳದ ಪ್ರಸಿದ್ಧಿಗೆ ಇವರು ಕಾರಣರು. ಇವರ ಕಲಾಸೇವೆಗಾಗಿ ಇವರಿಗೆ ರಾಜ್ಯ–ರಾಷ್ಟ್ರಪ್ರಶಸ್ತಿಯೂ ಲಭಿಸಿತು. ರಂಗಸ್ಥಳದ ರಾಜನೆಂಬ ಖ್ಯಾತಿ ಪಡೆದ ಇವರು ತುಂಬು ಆದರ್ಶವಾದಿಯಾಗಿದ್ದರು.

ವೀರಭದ್ರ ನಾಯ್ಕ ಬಣ್ಣದ ವೇಷದಿಂದ ಖ್ಯಾತಿ ಪಡೆದರು. ಮಾರಣಕಟ್ಟೆ ಮಂದರ್ತಿಮೇಳದ ಪ್ರಸಿದ್ಧಿಗೆ ಇವರೂ ಕಾರಣರು. ತೆಂಕುತಿಟ್ಟಿನ ಮೇಳದಲ್ಲೂ ಖ್ಯಾತಿ ಪಡೆದು ಸಮನ್ವಯ ವೇಷಧಾರಿ ಎಂದು ಖ್ಯಾತಿ ಪಡೆದರು. ಯಕ್ಷಗಾನ ಪ್ರಸಂಗವನ್ನು ಬರೆದು ಅಸಂಖ್ಯಾತ ಪುರಸ್ಕಾರ ಪಡೆದಿದ್ದಾರೆ. ಇವರು ಪೆರ್ಡೂರು, ಮಾರಣಕಟ್ಟೆ, ಹಿರಿಯಡ್ಕ, ಕೊಲ್ಲೂರು, ಅಮೃತೇಶ್ವರಿ, ಮಂದರ್ತಿ, ಸಾಲಿಗ್ರಾಮ ಮೇಳದಲ್ಲಿ ವಿಶಿಷ್ಟವಾದ ಸೇವೆಸಲ್ಲಿಸಿದ ಮಹಾನ್ ಕಲಾವಿದ, ಚಿಟ್ಟಾಣಿ ರಾಮಚಂದ್ರ ಹೆಗ್ಡೆ, ಜಲವಳ್ಳಿ ವೆಂಕಟೇಶ್,

ರಾವ್, ಕೆರೆಮನೆ ಶಂಭು ಹೆಗಡೆ, ಗಜಾನನ ಹೆಗಡೆ, ಮಹಾಬಲ ಹೆಗ್ಡೆ, ಬಳ್ಕೂರು ಕೃಷ್ಣಯಾಜಿ, ತೀರ್ಥಹಳ್ಳಿ, ಗೋಪಾಲ ಆಚಾರ್ಯ, ಜಲವಳ್ಳಿ ವಿದ್ಯಾಧರ ರಾವ್, ಆಜ್ರಿ ಗೋಪಾಲ ಗಾಣಿಗ, ಹಳ್ಳಾಡಿ ಮಂಜಯ್ಯ ಶೆಟ್ಟಿ, ಅರಾಟೆ ಮಂಜುನಾಥ, ಎಂ. ಎ. ನಾಯಕ, ಮೊಳಹಳ್ಳಿ ಹೆರಿಯ ಐರೋಡಿ ಗೋವಿಂದಪ್ಪ ಅವರು ಇತ್ತೀಚಿನ ತಲೆಮಾರಿನ ಪ್ರಸಿದ್ಧ ಕಲಾವಿದರಾಗಿದ್ದಾರೆ.

ಭಾಗವತರ ವಿಚಾರಕ್ಕೆ ಬಂದರೆ– ಹಿರಿಯಡ್ಕ ಗೋಪಾಲರಾಯರು ಮಂದರ್ತಿ, ಮಾರಣಕಟ್ಟೆ, ಅಮೃತೇಶ್ವರಿ, ಹಿರಿಯಡ್ಕ ಮೇಳದಲ್ಲೂ ಮಾರ್ವಿ ಶ್ರೀನಿವಾಸ ಉಪ್ಪೂರ್‌ರು ಮತ್ತು ಅವರ ಮಗ ನಾರಣಪ್ಪ ಉಪ್ಪೂರ್‌ರು ಅಮೃತೇಶ್ವರಿ, ಸೌಕೂರು, ಮಾರಣಕಟ್ಟೆ ಮೇಳದಲ್ಲೂ, ಗುಂಡ್ಮಿ ರಾಮಚಂದ್ರ ನಾವಡ, : ಜಾನುವಾರುಕಟ್ಟೆ, ಗೋಪಾಲಕೃಷ್ಣ ಕಮ್ತಿ ವಿಠಲಯ್ಯ, ಪೇತ್ರಿ, ಮರವಂತೆ ನರಸಿಂಹದಾಸರು, ಹಾರಾಡಿ ಅಣ್ಣಿ ಗಾಣಿಗರು, ಯಡಾಡಿ ನರಸಿಂಹ ಶೆಟ್ಟಿ, ಶೃಂಗೇರಿ ಮರಿ ಆಚಾರ್ಯರು, ಮತ್ಯಾಡಿ ವಿಠಲ ಶೆಟ್ಟಿ, ಹೇರೂರು ಮಂಜಪ್ಪ ಭಾಗವತರು, ಕೀಳಂಜೆ ಶಂಕರ ಭಾಗವತರು, ವಕ್ವಾಡಿ ಕೃಷ್ಣರಾಯರು, ಮುಕುಂದ ಪ್ರಭುಗಳು, ತೆಂಗಿನ ಜಡ್ಡು, ರಾಮಚಂದ್ರ ಸಾಮಂತರು, ನೀಲಾವರ ರಾಮಕೃಷ್ಣಯ್ಯನವರು, ಗುಂಡ್ಮಿ ರಾಮಚಂದ್ರ ನಾವಡರು ಮುಂತಾದವರು ಭಾಗವತರಾಗಿ ಮೆರೆದವರು, ಕಾಳಿಂಗ ನಾವಡರು ಯಕ್ಷಗಾನದ ಧ್ರುವತಾರೆಯಾಗಿ ಇತಿಹಾಸ ನಿರ್ಮಿಸಿದ್ದಾರೆ.

ನೀಲಾವರದ ರಾಮಕೃಷ್ಣಯ್ಯನವರು ಮದ್ದಳೆ ಬೇಳಂಜೆ ತಿಮ್ಮಪ್ಪ ನಾಯಕ, ಮದ್ದಳೆ, ರಾಜ್ಯಪ್ರಶಸ್ತಿ ವಿಜೇತ –ಮಾತನಾಡುವ ಮದ್ದಳೆಗಾರರೆಂದೇ ಖ್ಯಾತರಾದ ಹಿರಿಯಡ್ಕರ ಗೋಪಾಲರಾವ್ ಪ್ರೇಕ್ಷಕರ ಕಣ್ಮಣಿಯಾಗಿ ಮೆರೆದ ಹಿಮ್ಮೇಳದವರು, ಹಾಗೆನೇ ಚೆಂಡೆ ಕಿಟ್ಟು ಬಡಗುತಿಟ್ಟಿನ ಮೇಳದಲ್ಲಿ ಖ್ಯಾತರಾದವರು. ಮಂದರ್ತಿ ಮೇಳದಲ್ಲಿ ಸೇವೆ ಸಲ್ಲಿಸಿರುವ ವಿಜಯದಾಸರು ಅಪ್ರತಿಮ ಪ್ರತಿಭಾವಂತರು, ಚೆಂಡ ಕಿಟ್ಟು ಪ್ರತಿಭಾವಂತ ಚೆಂಡೆವಾದಕರು. ಹಾರಾಡಿ ರಾಮನಿಗೆ ಚಂಡೆ ಕಿಟ್ಟು ಪ್ರೇರಕಶಕ್ತಿಯಾಗಿದ್ದು, ಜನರಿಗೆ ಈ ಜೋಡಿ ರಂಜನೆಯನ್ನು ನೀಡುತ್ತಿತ್ತು. ಚೆಂಡೆ ವಾದನದಲ್ಲಿ ಕೆಮ್ಮಣ್ಣು ಆನಂದ, ಸಾಲಿಗ್ರಾಮ ಮೇಳದಲ್ಲಿ ರಾಮಕೃಷ್ಣ, ಮಂದರ್ತಿ ಮೇಳದಲ್ಲಿ ರಾಕೇಶ್ ಮಲ್ಯ, ಸೌಕೂರು ಮೇಳದಲ್ಲಿ ಗಜಾನನ ದೇವಾಡಿಗ, ಪೆರ್ಡೂರು ಮೇಳದಲ್ಲಿ ಕೋಟ ಶಿವಾನಂದ, ಜನಾರ್ದನ ಆಚಾರಿ, ರಾಮ ಭಂಡಾರಿ ಮಾರಣಕಟ್ಟೆ ಮೇಳದಲ್ಲೂ, ಮದ್ದಳೆಯಲ್ಲಿ ಪೆರ್ಡೂರು ಮೇಳದ ದುಗ್ಗಪ್ಪ ಗುಡಿಗಾರ್ ಹಾಗೂ ಶಂಕರ ಭಾಗವತ, ಗಜಾನನ ಭಂಡಾರಿ ಮಂದರ್ತಿ ಮೇಳದ, ಸುಬ್ರಾಯ ಭಂಡಾರಿ ಸುರಗಿಕಟ್ಟೆ ಬಸವ, ಶ್ರೀನಿವಾಸ ಆಚಾರ್ಯರು ಇತ್ತೀಚಿನ ತಲೆಮಾರಿನ ಕಲಾವಿದರಾಗಿದ್ದಾರೆ. ಈ ತಲೆಮಾರಿನ ಭಾಗವತರಲ್ಲಿ ಸುಬ್ರಹ್ಮಣ್ಯ ಧಾರೇಶ್ವರ, ಸುರೇಶ ಶೆಟ್ಟಿ (ಪೆರ್ಡೂರು ಮೇಳ), ಹೇರಂಜಾಲು ಗೋಪಾಲ ಗಾಣಿಗ, ಕೊಳಗಿ ಕೇಶವ ಹೆಗ್ಗಡೆ (ಸಾಲಿಗ್ರಾಮ ಮೇಳ), ಕೆ. ವಿ. ಹೆಗಡೆ, ಹೊಸಂಗಡಿ ರವೀಂದ್ರ, ನಾರಾಯಣ ಶಬರಾಯ, ರವೀಂದ್ರ, ರಾಘವೇಂದ್ರ ಮಯ್ಯ ಮುಂತಾದವರು ಪ್ರೇಕ್ಷಕರ ಗಮನ ಸೆಳೆದವರು.

ಇನ್ನು ಯಕ್ಷಗಾನ ಕೃತಿಕಾರರ ವಿಚಾರಕ್ಕೆ ಬಂದರೆ, ರತ್ನಾಕರವರ್ಣಿಯಿಂದ ಮುದ್ದಣನ ಕಾಲದ ತನಕ ಅತ್ಯುತ್ತಮ ಯಕ್ಷಗಾನ ಕೃತಿಗಳು ಬಂದಿದ್ದು, ನಮ್ಮ ಜಿಲ್ಲೆಯಲ್ಲಿ ಸಾಹಿತ್ಯ ಕೃತಿಗಳ ಸಂಖ್ಯೆಯನ್ನು ಗಮನಿಸಿದರೆ ಯಕ್ಷಗಾನ ಶ್ರವ್ಯ–ದೃಶ್ಯ ಮಾಧ್ಯಮವಾಗಿ ಜನಪ್ರಿಯ ಮಾಧ್ಯಮವಾಗಿರಬೇಕು. ಬ್ರಹ್ಮಾವರ ಸಮೀಪದ ವಿಷ್ಣು ವಾರಂಬಳ್ಳಿ ಬರೆದ ವಿರಾಟಪರ್ವ ಇಂದಿಗೂ ಜನಪ್ರಿಯವಾದ ಪ್ರಸಂಗ. 15ನೇ ಶತಮಾನದ ಕವಿ, ಅತ್ಯಂತ ಪ್ರಾಚೀನ ಯಕ್ಷಗಾನದ ಕವಿಯಾಗಿರಬೇಕು.ದೇವದಾಸ, ಹಟ್ಟಿಯಂಗಡಿ ರಾಮ ಭಟ್ಟ, ಪಾಂಡೇಶ್ವರ ವೆಂಕಟ, ಧ್ವಜಪುರದ ನಾಗಪ್ಪಯ್ಯ (ಕೋಟೇಶ್ವರ) ಮುಂತಾದವರು ಪ್ರಸಿದ್ಧ ಯಕ್ಷಗಾನ ಕೃತಿಕಾರರಾಗಿ ಜನಪ್ರಿಯರಾದವರು. ಇವರ ಪ್ರಸಂಗಗಳು ಇಂದಿಗೂ ಜನಮನ್ನಣೆ ಗಳಿಸಿ ಮೆರೆಯುತ್ತಿವೆ. ಇದರ ಜೊತೆ ಹಾರಾಡಿ ರಾಮ ಗಾಣಿಗರಂತಹವರು ಕುಮಾರವ್ಯಾಸ ಭಾರತದ ಪದ್ಯವನ್ನು ಸೊಗಸಾಗಿ ರಂಗದಲ್ಲಿ ಹಾಡಿ ಕುಣಿದು ಪ್ರೇಕ್ಷಕರ ಭಾವವನ್ನು ಕೆದಕಿರುತ್ತಾರೆ. ಕವಿ ಮುದ್ದಣನು ಪ್ರಸಂಗರಚನೆ ಮಾಡಿದವನಾಗಿದ್ದು ರತ್ನಾವತಿ ಕಲ್ಯಾಣ ರಂಗದ ಮೇಲೆ ಯಶಸ್ಸನ್ನು ಸಾಧಿಸಿದ ಕೃತಿ, ಜೋರಾಡಿ ವೆಂಕಟರಮಣ ಭಟ್ ಹಿರಿಯಣ್ಣ ಹೆಬ್ಬಾರರು, ಶಿರೂರು ಪಣಿಯಪ್ಪಯ್ಯನವರು, ಮಾರ್ವಿ ವಾದಿರಾಜ ಹೆಬ್ಬಾರರು, ಶ್ರೀನಿವಾಸ ಉಪ್ಪರರು, ನಾರಾಣಪ್ಪ ಉಪ್ಪರರು, ಸೀತಾನದಿ ಗಣಪಯ್ಯ ಶೆಟ್ಟಿ, ಕಂದಾವರ ರಘುರಾಮ ಶೆಟ್ಟಿ, ಡಿ. ವಿ. ಹೊಳ್ಳ –ಹೀಗೆ ಪ್ರಸಿದ್ಧ ಯಕ್ಷಗಾನ ಕೃತಿಕಾರರು ಯಕ್ಷಗಾನ ರಂಗವನ್ನು ಶ್ರೀಮಂತಗೊಳಿಸಿದರು. ಪ್ರದರ್ಶನ ಕಲೆಗೊಂದು ಔಚಿತ್ಯವನ್ನು ತಂದುಕೊಟ್ಟರು.

ಯಕ್ಷಗಾನ ವೇಷಭೂಷಣದಿಂದಲೂ ಈ ಪ್ರದರ್ಶನಕಲೆಗೆ ಅಪರಿಮಿತ ಗೌರವವುಂಟು. ಯಕ್ಷಗಾನವನ್ನು ಹೋಲುವ ರಂಗಭೂಮಿ, ಜಪಾನ್ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇದ್ದರೂ ಭಾರತದಲ್ಲಿನ ಈ ರಂಗಭೂಮಿಗೆ ಧಾರ್ಮಿಕ ಕಟ್ಟುಕಟ್ಟಳೆ, ಪರಂಪರೆ ಇದೆ. ಇದಲ್ಲದೆ ಚಿನ್ನ ಬೆಳ್ಳಿಯಂತೆ ಹೊಳೆಯುವ ರೇಷ್ಮೆ, ಪಟ್ಟಿ, ಜರಿತಾರಿ, ವಸ್ತ್ರಾಭರಣ, ಕಿರೀಟ, ಮುಂಡಾಸು, ಚಿತ್ರ, ತರತರವಾದ ರಂಗುರಂಗಿನ ಆಭರಣ, ವಸ್ತ್ರಾಲಂಕಾರ, ಚಲನ–ನೃತ್ಯ–ನ್ಯಾಸ, ವಿನ್ಯಾಸ, ಗೆಜ್ಜೆಯ ಧ್ವನಿ, ಹಾವಭಾವ, ನಡೆನುಡಿಯಿಂದ ಮೋಹಕವಾದ ಒಂದು ವಿಚಿತ್ರ ಲೋಕಕ್ಕೆ ಕೊಂಡೊಯ್ದು ಯಾವುದೋ ಜನಾಂಗದ ಕಲ್ಪನೆಯ ಭಾವನೆಯನ್ನು ಈ ಯಕ್ಷಗಾನ ಸೃಷ್ಟಿಸಿದೆ. ಈ ವೇಷಧಾರಿಗಳು ಕುಣಿದು ನಲಿದರೆ, ಕಲಿಯುಗ ದ್ವಾಪರ ಯುಗವಾಗಿ ಪರಿವರ್ತಿತವಾಗುತ್ತದೆ. ಬಡಗುತಿಟ್ಟಿಗೂ ತೆಂಕುತಿಟ್ಟಿಗೂ ಇರುವ ವೈವಿಧ್ಯ, ವ್ಯತ್ಯಾಸಗಳಂತೆ ಬಡಗುತಿಟ್ಟಿನ ಮತ್ತು ಉತ್ತರ ಕನ್ನಡದ ತಿಟ್ಟಿನ ವೇಷಭೂಷಣ, ಕುಣಿತ ಮಾತುಗಾರಿಕೆಯಲ್ಲಿ ವ್ಯತ್ಯಾಸ ಗಮನಿಸಲು ಸಾಧ್ಯವಿದೆ. ಈ ಭಿನ್ನತೆಗಳಿದ್ದಾಗಲೂ ಈ ಪ್ರದರ್ಶನ ಕಲೆ ಒಂದೇ ಭಾವವನ್ನು ಭಕ್ತಿಯನ್ನು ಹೊರ ಹೊಮ್ಮಿಸುತ್ತದೆ. ಎಷ್ಟೋ ಬದಲಾವಣೆ ಸಾಂಸ್ಕೃತಿಕ ಪಲ್ಲಟ ಹಾಗೂ ಸಮೂಹ ಮಾಧ್ಯಮ, ಸಿನೆಮಾಗಳ ಪ್ರಭಾವ ಯಕ್ಷಗಾನದ ಮೇಲಾಗಿದ್ದರೂ ಇನ್ನೂ ತನ್ನತನ ಸಹಜತೆಯನ್ನು ಉಳಿಸಿಕೊಂಡು ಪ್ರೇಕ್ಷಕರ ನೆಚ್ಚಿನ ಪ್ರದರ್ಶನಕಲೆಯಾಗಿದೆ. ಇಡೀ ರಾತ್ರಿಯೆಲ್ಲಾ( ಈಗ ಕಾಲಮಿತಿಗೆ ಒಳಪಟ್ಟಿದೆ) ಭಯ ಭಕ್ತಿಯಿಂದ ಈ ಕಲೆಯನ್ನು ಆಸ್ವಾದಿಸುವ ರಸಿಕರು. ಯಕ್ಷಗಾನ ಕಲೆ ಹಾಗೂ ಆಚರಣೆಯನ್ನು ಧಾರ್ಮಿಕ ಮನೋಭಾವದಿಂದ ಸ್ವೀಕರಿಸಿದ್ದಾರೆ. ಆರಂಭದ ಗಣಪತಿ ಪೂಜೆ ಹಾಗೂ ಅಂತ್ಯದಲ್ಲಿ ಶುಭಾಶಯ ಹಾಗೂ ದಕ್ಕಿತೋ ದಕ್ಕಿತು! ಎಂಬ ಆನಂದಾನುಭೂತಿ' ಈ ಕಲೆಯಲ್ಲಿ ಇರುವುದರಿಂದ ಪ್ರೇಕ್ಷಕರು ಆತ್ಮತೃಪ್ತಿ ಹೊಂದಿ ಭಕ್ತಿರಸದಲ್ಲಿ ತೇಲಾಡುತ್ತಾರೆ. ನೆಮ್ಮದಿ ಕಂಡುಕೊಂಡಿದ್ದಾರೆ. ಯಕ್ಷಗಾನ ನೋಡಿದರೆ ಹಾಳಾಗುತ್ತಾರೆಂಬ ಕಲ್ಪನೆ ಇತ್ತೀಚಿನ ದಿನಗಳಲ್ಲಿ ಹೊರಟು ಹೋಗಿದೆ. ಈಗ ಟಿ. ವಿ. ಮಾಧ್ಯಮದಲ್ಲಿ ಕನ್ನಡದ ಹಲವು ಚಾನಲುಗಳಲ್ಲಿ ವಾರಕ್ಕೊಮ್ಮೆ ಯಕ್ಷಗಾನ ಪ್ರಸಂಗ ಪ್ರಸಾರಗೊಳಿಸುತ್ತಿದೆ. ರೇಡಿಯೋದಲ್ಲೂ ಯಕ್ಷಗಾನ ತಾಳಮದ್ದಳೆ ಕೇಳಿಸುತ್ತದೆ. ಹೊರ ನಾಡು, ಹೊರ ದೇಶಕ್ಕೂ ಈ ಯಕ್ಷಗಾನ ಕಲೆ ಹಬ್ಬಿದೆ. ಮಕ್ಕಳ ಮೇಳ, ದೊಡ್ಡವರ ಮೇಳ, ಹೆಣ್ಣುಮಕ್ಕಳ ಮೇಳ –ಹೀಗೆ ಹಲವು ಮೇಳಗಳು ಹಲವಾರು ಬಾರಿ ವಿದೇಶ ಪ್ರಯಾಣ ಮಾಡಿ ವಿದೇಶದಲ್ಲೂ ಯಕ್ಷಗಾನ ಪರಂಪರೆಯನ್ನು ಪ್ರದರ್ಶಿಸಿದೆ. ಪ್ರದರ್ಶನದ ಹಿಂದೆ ಸ್ಪಷ್ಟವಾಗಿ ತಾವು ಯಾವ ಮೇಳದವರೆಂದು ಗುರುತಿಸಿಕೊಳ್ಳುತ್ತಾರೆ.

ಮಂದರ್ತಿ, ಪೆರ್ಡೂರು, ಹಿರಿಯಡ್ಕ, ಅಮೃತೇಶ್ವರಿ, ಮಾರಣಕಟ್ಟೆ, ಸೌಕೂರು, ಕಮಲಶಿಲೆ, ಹಾಲಾಡಿ ಮೇಳದವರು ತಾವೆಂಬ ಅಭಿಮಾನದಿಂದ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಜಿಲ್ಲೆಯ ಅನೇಕ ಕಲಾವಿದರು, ಸರಕಾರದಿಂದ ಗೌರವಧನ ಪ್ರಶಸ್ತಿಯನ್ನು ಪಡೆದಿದ್ದಾರೆ. ಪ್ರಭಾಕರ ಜೋಶಿ, ಕಬ್ಬಿನಾಲೆ ವಸಂತ ಭಾರದ್ವಾಜ, ಶ್ರೀಕಾಂತ ಸಿದ್ದಾಪುರ –ಮುಂತಾದವರು ಬಡಗುತಿಟ್ಟಿನ ಯಕ್ಷಗಾನ ಕಲೆಯ ಮೇಲೆ ಆಳವಾದ ಅಧ್ಯಯನ ನಡೆಸಿರುತ್ತಾರೆ. ಪ್ರಸ್ತುತ ಮಂಗಳೂರು, ಮುಂಬೈ ಹಾಗೂ ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಜೊತೆಗೆ ಕನ್ನಡ ವಿಶ್ವವಿದ್ಯಾನಿಲಯ ಹಂಪೆಯ ವಿವಿದ ಕೇಂದ್ರ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಇದರ ಸಂಶೋಧನೆ ಮತ್ತು ಆಳವಾದ ಅಭ್ಯಾಸ ಮುಂದುವರಿದಿದೆ.

ಯಕ್ಷಗಾನ ಮೇಳದಲ್ಲೂ ಸ್ಪರ್ಧೆ, ಪವಾಡಗಳ ಕುರಿತು ಐತಿಹ್ಯ, ಕಥೆಗಳು ಹುಟ್ಟಿಕೊಂಡಿವೆ. ಯಕ್ಷಗಾನ ಮೇಳ, ಕಲಾವಿದರ, ಭಾಗವತರ ಅಭಿಮಾನಿಗಳು ಅನೇಕರಿದ್ದಾರೆ. ಅನೇಕ ಭಾಗವತರು ತಮ್ಮ ಕಂಠದಿಂದ, ಅನೇಕ ಪುರುಷ ವೇಷಧಾರಿಗಳು ತಮ್ಮ ಆಂಗಿಕ ಅಭಿನಯ, ಚಾಕಚಕ್ಯತೆ, ಪ್ರತಿಭಾಪೂರ್ಣ, ಪಾಂಡಿತ್ಯಪೂರ್ಣ ಮಾತುಗಳಿಂದ ಪ್ರೇಕ್ಷಕರ ಮನ ಗೆದ್ದಿರುವುದು, ಕೆಲವು ಕಲಾವಿದರು ಪ್ರೇಕ್ಷಕರ ಮನದಿನಿಯರಾದುದು ಚರಿತ್ರಾರ್ಹ ಘಟನೆಯೇ ಆಗಿದೆ. ಬಡಗುತಿಟ್ಟಿನ ಅನೇಕ ಕಲಾವಿದರು ಜೀವಂತವಾಗಿರುವಾಗಲೇ ದಂತಕಥೆಯಾದರು. ಅಷ್ಟೊಂದು ಪ್ರಭಾವಶಾಲಿಯಾದ ಪ್ರದರ್ಶನಕಲೆಯ ಹುಟ್ಟಿಗೆ ಕಾರಣ ಉಡುಪಿ ಜಿಲ್ಲೆ ಹಾಗೂ ಈ ಜಿಲ್ಲೆಯ ಧಾರ್ಮಿಕ ಕೇಂದ್ರಗಳೆಂದರೆ ತಪ್ಪಿಲ್ಲ.

**ಪರಾಮರ್ಶನ ಗ್ರಂಥಗಳು :–**


1. ಶಿವರಾಮ ಕಾರಂತ ಕೆ.: 'ಯಕ್ಷಗಾನ' ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು–1974
2. ಗುರುರಾಜ ಭಟ್ ಪಿ.: ಮಂದರ್ತಿ ಸಮೀಕ್ಷೆ, ದುರ್ಗಾಪರಮೇಶ್ವರಿ ದೇವಸ್ಥಾನ ಮಂದರ್ತಿ– 1987
3. ಜಿ.ಎಸ್. ಭಟ್ಟ: 'ಯಕ್ಷಗಾನ ಪರಿಶೀಲನ' ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಆಕಾಡೆಮಿ ಬೆಂಗಳೂರು – 1995
4. ಮಯ್ಯ ಪ.ನಾ: 'ಕೋಟಾದವರು' ಪಾರಂಪಳ್ಳಿ ಪ್ರಕಾಶನ, ಮಂಗಳೂರು – 1995
5. ಕೆರೆಮನೆ ಶಂಭು ಹೆಗಡೆ: 'ಯಕ್ಷಗಾನ ಚಿಂತನ', ಕೆರೆಮನೆ ಶಂಭು ಹೆಗಡೆ ಸನ್ಮಾನ ಸಮಿತಿ ಹೊನ್ನಾವರ ಉ.ಕ. – 1999
6. ಡಾ. ಉದಯಕುಮಾರ ಶೆಟ್ಟಿ: 'ಉಡುಪಿ ತಾಲೂಕಿನ ಗ್ರಾಮ ದೇವತೆಗಳು' ಸ್ವಾಗತ ಸಮಿತಿ, 74ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ –2007